**KARNATAKA LOKAYUKTA**

No. UPLOK-2 /DE/929/2017/ARE-16
*(Encl: Recommendation & original Report of Inquiry Officer with connected records)*

Dr.B.R.Ambedkar Veedhi,
Multi Storied Building,
Bengaluru,
dated: 14/01/2020.

**To,**
Smt. Uma Mahadevan, IAS,
Principal Secretary to Government,
Rural Development &
Panchayath Raj Department,
M.S.Building,
Bengaluru – 560001.

Respected Madam,

**Sub :** Departmental inquiry against, Sri.M.K.Ramesh, Panchayath Development Officer, and (2) Sri.Manjunath the then Panchayath Development Officer, Thogarikatte Grama Panchayath, Presently Myduru Grama Panchayath, Harapanhalli Taluk, Davanagere Dist-reg.

**Ref :** Government Order No. ಗ್ರಾಅಪ 581 ಗ್ರಾಪಂಕಾ 2017 ಬೆಂಗಳೂರು ದಿನಾಂಕ : 26.07.2017

* * *

With Reference to the above, I am directed to forward herewith the recommendation of Hon'ble Uplokayukta, State of Karnataka, dated 13.01.2020 along with the report of inquiry Officer and relevant records as noted below:

**INDEX**

| Sl. No. | Particulars of Documents | Page Nos. |
|---|---|---|
| | Recommendation dated 13/01/2020 of Hon'ble | One sealed |

| | | |
|---|---|---|
| | Upalokayukta along with inquiry report | cover |
| **File 1** | Order Sheet File (Original). | 1-12 |
| **File 2** | **Documents containing :**<br>I. 12(3) report of Hon'ble Upalokayukta-II, dated: 22/06/2017 (xerox).<br>II.Government Order No. ಗ್ರಾಅಪ/581/ಗ್ರಾಪಂಕಾ/2017 ಬೆಂಗಳೂರು, ದಿನಾಂಕ 26/07/2017 (xerox).<br>III. Nomination order No: Uplok-2/DE/929/2017 dated: 10/08/2017 of Hon'ble Upalokayukta-II, Bangalore (Xerox) | 13-17<br>18-21<br>22-23 |
| | IV. Served copy of Articles of charges dtd.13/09/2017, 6 pages (Original) | 24-29 |
| | V. First Oral Statement of DGO-1 dtd:27/09/2017 (Original) | 30 |
| | VI. First Oral Statement of DGO-2 dtd:27/09/2017 (Original) | 31 |
| | VII. Written statement of DGO-1 dt.3/3/2018 (original) | 33-35 |
| | VIII. Second oral statement of DGO-1 dt.29/8/2019, (original) | 36 |
| | IX. Second oral statement of DGO-2 dt.29/8/2019, (original) | 37 |
| | X.Written arguments of DGO 1 and 2 dt.16/12/2019 (original) | 38-40 |
| **File 3** | **Witness examined on behalf of the Disciplinary Authority** | |
| | **PW-1**: Sri.Gowli Eranna, dt.23/5/2018, 3 pages (Original) | 41-43 |
| | **PW-2:** Sri.N.Lingareddy dt.06/02/2019, (original) | 44-45 |
| | **PW-3:** Sri.S.C.Manjappa, dt.4/5/2019(original) 7 pages | 46-52 |
| | **Documents marked on behalf Disciplinary Authority (Ex.P1 to Ex.P.6)** | |

| | | |
|---|---|---|
| | **Ex.P-1:** Complaint of Sri.Gowli Eranna and others in form No.I dt.16/6/2014(original) | 53-57 |
| | **Ex.P-2:** Complaint of Sri.Gowli Eranna and others in form No.II (original) dt.16/6/2014 | 58-59 |
| | **Ex.P-3:** Enquiry Report of Sri.S.C.Manjappa, DSP,KLA, Davanagere dt.26/11/2014, 5 pages (original) | 60-64 |
| | **Ex.P-4:** Report of Sri.N.Lingareddy, SP,KLA, Davanagere dt.28/11/2014 3 pages (original) | 65-67 |
| | **Ex.P-5:** letter of Sri.S.C.Manjappa, DSP, KLA, dt.11/9/2017 addressed to CEO, Tq.Panchayath, Harapanahalli with enclosures(62 sheets) page No.68 –original, Page No.69 to 136 (xerox) | 68-136 |
| | **Ex.P-6**: Photographs – 9 Nos. (Original | 137-141 |
| | **Ex.P.7:** Statement of witnesses, 4 sheets (original) | 142-145 |
| | **Ex.P.8:** Letter of CEO, Tq Panchyath, Harapanahalli to DSP,KLA, Davanagere dt.20/11/2014, 4 sheets, (original) | 146-149 |
| | **Ex.P.9:** Photographs-2 Nos. (original) | 150 |
| | **Ex.P.10:** Photograph-1 No. (original) | 151 |
| | **Ex.P.11:** Photograph-1 No. (original) | 152 |
| | **Witness examined on behalf of the DGO** | |
| **File 4** | **DW-1:** Sri. M.K.Ramesh dt.30/09/2019, 5 pages, (Original) | 153-157 |
| | **DW-2:** Smt.Maddi Kenchamma, dt.20/11/2019, 4 pages, (original) | 158-161 |
| | **Documents marked on behalf of the Disciplinary Authority** | |
| | **Ex.D-1:** Copy of Statement of Kenchamma (xerox) | 162 |
| | **Ex.D-2:** Copy of photographs, 2 pages (xerox) | 163-164 |
| | **Ex.D.3:** Copy of bank passbook 2 pages(xerox) | 165-166 |
| | **Ex.D.4:** Copy of statement of | 167 |

| | | |
|---|---|---|
| | Smt.Saritha(xerox) | |
| | **Ex.D.5:** Copy of cheque slips , 3 pages(xerox) | 168-170 |
| | **Ex.D.6:** Copy of bank pass book, 2 pages (xerox) | 171-172 |

Kindly acknowledge the receipt of the above said documents.

Yours faithfully,

(B.V.Patil)
Registrar,
Karnataka Lokayukta,
Bengaluru.

Copy to the Addl.Registrar of Enquiries-16, Karnataka Lokayukta, Bengaluru., for information and further necessary action.

KARNATAKA LOKAYUKTA

No. Uplok-2/DE/929/2017/ARE-16

Multi-storeyed Building,
Dr.B.R. Ambedkar Veedhi,
Bengaluru, dt.13.1.2020.

**RECOMMENDATION**

Sub: Departmental Enquiry against Sri.M.K.Ramesh, Panchayath Development Officer, and (2) Sri. Manjunath the then Panchayath Development Officer, Thogarikatte Grama Panchayath, presently Myduru Grama Panchayath, Harapanahalli Taluk, Davanagere district-reg.

Ref: 1. Govt. Order No. ಗ್ರಾಅಪ/581/ಗ್ರಾಪಂಕಾ/2017, Bengaluru, dated 26.7.2017 .
2. Nomination Order No:Uplok-2/DE/929/2017. of Hon'ble Upalokayukta-2, Bengaluru, dated 10.8.2017.
3. Report of ARE-16, KLA, Bengaluru, dated 7.1.2020.

~~~~~~~

Government, by order dt. 26.7.2017, initiated the disciplinary proceedings against Sri.M.K.Ramesh, Panchayath Development Officer, and (2) Sri. Manjunath the then Panchayath Development Officer, Thogarikatte Grama Panchayath, presently Myduru Grama Panchayath, Harapanahalli Taluk, Davanagere district [hereinafter referred to as the Delinquent Government Officials, for short 'DGOs'] and entrusted the departmental inquiry to this Institution.

2. This Institution, by Nomination Order dated 10.8.2017 nominated Additional Registrar of Enquiries-11, Karnataka Lokayukta, Bengaluru, to conduct departmental inquiry against the DGOs for the alleged misconduct said to have been committed by them.

3. The charge framed against the DGOs, Sri.M.K.Ramesh, Panchayath Development Officer, and (2) Sri. Manjunath the then Panchayath Development Officer, Thogarikatte Grama Panchayath, presently Myduru Grama Panchayath,
~~~~~~~

Harapanahalli Taluk, Davanagere district, is as follows;

"ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ.ಎಂ.ಕೆ.ರಮೇಶ್ ಆದ ನೀವು ಹಾಗೂ ಎರಡನೆಯ ಆಪಾದಿತ ನೌಕರರಾದ ಶ್ರೀ ಮಂಜುನಾಥ ಆದ ನೀವುಗಳು ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ, ತೊಗರಿಕಟ್ಟೆ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, 2010-11ನೇಯ ಸಾಲಿನ ಬಸವ ಇಂದಿರಾ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯಾದ ಶ್ರೀಮತಿ ಮಡ್ಡಿ ಕೆಂಚಮ್ಮ ಕೋಂ ವೀರಪ್ಪರವರಿಗೆ ಮನೆ ಮಂಜೂರಾಗಿದ್ದು, ಅವರು ಮನೆ ನಿರ್ಮಿಸದಿದ್ದರೂ ಸಹ ಅವರಿಗೆ ನೀವು ಎಂದರೆ ಒಂದನೆಯ ಆಪಾದಿತ ಸರ್ಕಾರಿ ನೌಕರರು ರೂ.49,500/-ಗಳ ಸಹಾಯಧನ ಮಂಜೂರು ಮಾಡಿ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿದ್ದು, ಮತ್ತೋರ್ವ ಫಲಾನುಭವಿಯಾದ ಶ್ರೀಮತಿ ಜಿ. ಸರಿತಾರವರಿಗೂ ಸಹ 2011-12ರಲ್ಲಿ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಮನೆ ಮಂಜೂರಾಗಿದ್ದು, ಸದರಿ ಶ್ರೀಮತಿ ಜಿ.ಸರಿತಾರವರು ಮನೆ ನಿರ್ಮಿಸದಿದ್ದರೂ ಸಹ ಅವರಿಗೆ ನೀವು ಎಂದರೆ ಎರಡನೆಯ ಆಪಾದಿತ ಸರ್ಕಾರಿ ನೌಕರರು ರೂ.35,000/-ಗಳನ್ನು ಸಹಾಯಧನವಾಗಿ ಮಂಜೂರು ಮಾಡಿ, ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿದ್ದು, ನೀವುಗಳಿಬ್ಬರು ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ii) ಮತ್ತು (iii)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ".

4. The Inquiry Officer (Additional Registrar of Enquiries-16) on proper appreciation of oral and documentary evidence has held that, 'the Disciplinary Authority has 'proved' the charge levelled against the DGO Sri.M.K.Ramesh, Panchayath Development Officer, and (2) Sri. Manjunath, the then Panchayath Development Officer, Thogarikatte Grama Panchayath, presently Myduru Grama Panchayath, Harapanahalli Taluk, Davanagere District.'

5. On re-consideration of report of inquiry and all the records, I do not find any reason to interfere with the findings recorded by the Inquiry Officer.

Therefore, it is hereby recommended to the Government to accept the report of Inquiry Officer.

6. As per the First Oral Statement of DGOs furnished by the Inquiry Officer, Sri.M.K.Ramesh, Panchayath Development Officer, and (2) Sri. Manjunath, the then Panchayath Development Officer, Thogarikatte Grama Panchayath, presently Myduru Grama Panchayath, Harapanahalli Taluk, Davanagere district, will retire from service on 30.06.2037 and 28.02.2040 respectively.

7. Having regard to the nature of charge 'proved' against DGOs – Sri.M. K. Ramesh, Panchayath Development Officer, and (2) Sri. Manjunath, the then Panchayath Development Officer, Thogarikatte Grama Panchayath, presently Myduru Grama Panchayath, Harapanahalli Taluk, Davanagere district and on consideration of the totality of circumstances-,

iii) 'it is hereby recommended to the Government to impose penalty of 'withholding four annual increments payable to DGO – Sri.M. K. Ramesh, Panchayath Development Officer with cumulative effect.'

iv) 'it is hereby recommended to the Government to impose penalty of 'withholding four annual increments payable to DGO – Sri. Manjunath, the then Panchayath Development Officer with cumulative effect.'

8. Action taken in the matter shall be intimated to this Authority. Connected records are enclosed herewith.

Sd/- 13-1-20

**(JUSTICE B.S.PATIL)**
Upalokayukta-2,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-929/2017/ಎ.ಆರ್.ಇ-16

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 07/01/2020.

## ವಿಚಾರಣಾ ವರದಿ

**ಉಪಸ್ಥಿತರು:** ಸೆಲ್ವಕುಮಾರ್.ಸಿ, ಅಪರ ನಿಬಂಧಕರು
ವಿಚಾರಣೆಗಳು-16, ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** (1)ಶ್ರೀ ಎಂ.ಕೆ.ರಮೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತೊಗರಿಕಟ್ಟೆ ಗ್ರಾಮ ಪಂಚಾಯಿತಿ ಮತ್ತು (2)ಶ್ರೀ.ಮಂಜುನಾಥ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತೊಗರಿಕಟ್ಟೆ ಗ್ರಾಮ ಪಂಚಾಯತಿ, ಹಾಲಿ ಮೈದೂರು ಗ್ರಾಮ ಪಂಚಾಯತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:** 1.ಕಂಪ್ಲೆಂಟ್/ಉಪಲೋಕ್/ಬಿಡಿ-2458/2014/ಡಿ.ಆರ್.ಇ-1 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 22/06/2017.
2.ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/581/ಗ್ರಾಪಂಕಾ/2017, ಬೆಂಗಳೂರು, ದಿನಾಂಕ:26/07/2017.
3.ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ-929/2017, ಬೆಂಗಳೂರು ದಿನಾಂಕ: 10.08.2017.
4.Note No.Uplok-1 & 2/DE/Transfers/2019, dated 07.02.2019.

* * * *

1) ಈ ದೂರನ್ನು, ದೂರುದಾರರಾದ ಶ್ರೀ ಗೌಳಿ ಈರಣ್ಣ, ಗೋವೇರಹಳ್ಳಿ ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರರುಗಳಾದ (1) ಶ್ರೀ ಎಂ.ಕೆ.ರಮೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತೊಗರಿಕಟ್ಟೆ ಗ್ರಾಮ ಪಂಚಾಯಿತಿ ಮತ್ತು (2) ಶ್ರೀ.ಮಂಜುನಾಥ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತೊಗರಿಕಟ್ಟೆ ಗ್ರಾಮ ಪಂಚಾಯತಿ, ಹಾಲಿ ಮೈದೂರು ಗ್ರಾಮ ಪಂಚಾಯತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆರವರುಗಳ **(ಇನ್ನು ಮುಂದೆ ಆ.ಸ.ನೌ ಎಂದು ಕರೆಯಲ್ಪಡುತ್ತಾರೆ)** ವಿರುದ್ಧ ಕರ್ತವ್ಯ ಲೋಪ ಮತ್ತು ದುರ್ನಡತೆಯಿಂದ ವರ್ತಿಸಿರುವುದಾಗಿ ಆಪಾದಿಸಿ ದೂರು ದಾಖಲಿಸಿರುತ್ತಾರೆ.

2) ತನಿಖೆ ಪೂರ್ಣಗೊಂಡ ನಂತರ ಸರ್ಕಾರಕ್ಕೆ, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ಅಡಿಯಲ್ಲಿ, ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿ ಅನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ 26/07/2017ರಂದು ಮಾನ್ಯ ಉಪಲೋಕಾಯುಕ್ತ-2ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿದ್ದು, ಅದರಂತೆ ಮಾನ್ಯ ಉಪಲೋಕಾಯುಕ್ತ-2ರವರು ದಿನಾಂಕ 10/08/2017ರಂದು ಅಪರ ನಿಬಂಧಕರು, ವಿಚಾರಣೆಗಳು-11ರವರಿಗೆ ವಿಚಾರಣೆ ಮಾಡಿ ವರದಿಯನ್ನು, ಉಲ್ಲೇಖ (3)ರಲ್ಲಿ ಕಾಣಿಸಿದಂತೆ ಶಿಫಾರಸ್ಸು ಮಾಡಿದ್ದು, ಉಲ್ಲೇಖ (4)ರಂತೆ ಅಪರ ನಿಬಂಧಕರು, ವಿಚಾರಣೆಗಳು-11ರವರಿಂದ ಈ ವಿಚಾರಣಾ ಪ್ರಾಧಿಕಾರವಾದ ಅಪರ ನಿಬಂಧಕರು, ವಿಚಾರಣೆಗಳು-16ಕ್ಕೆ ವರ್ಗಾವಣೆಗೊಂಡಿರುತ್ತದೆ.

3) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌರವರುಗಳ ವಿರುದ್ಧ ದೋಷರೋಪಣೆ (Article of charges)ಅನ್ನು ಅಪರ ನಿಬಂಧಕರು, ವಿಚಾರಣೆಗಳು-11ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ-1 ಮತ್ತು ಅನುಬಂಧ-2ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರುಗಳಿಗೆ ದಿನಾಂಕ 13/09/2017ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## <u>ಅನುಬಂಧ-1</u>

## <u>ದೋಷಾರೋಪಣೆ</u>

4) ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ.ಎಂ.ಕೆ.ರಮೇಶ್ ಆದ ನೀವು ಹಾಗೂ ಎರಡನೆಯ ಆಪಾದಿತ ನೌಕರರಾದ ಶ್ರೀ ಮಂಜುನಾಥ ಆದ ನೀವುಗಳು ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ, ತೊಗರಿಕಟ್ಟೆ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, 2010-11ನೇಯ ಸಾಲಿನ ಬಸವ ಇಂದಿರಾ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯಾದ ಶ್ರೀಮತಿ ಮಡ್ಡಿ ಕೆಂಚಮ್ಮ ಕೋಂ ವೀರಪ್ಪರವರಿಗೆ ಮನೆ ಮಂಜೂರಾಗಿದ್ದು, ಅವರು ಮನೆ ನಿರ್ಮಿಸದಿದ್ದರೂ ಸಹ ಅವರಿಗೆ ನೀವು ಎಂದರೆ ಒಂದನೆಯ ಆಪಾದಿತ ಸರ್ಕಾರಿ ನೌಕರರು ರೂ.49,500/-ಗಳ ಸಹಾಯಧನ ಮಂಜೂರು ಮಾಡಿ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿದ್ದು, ಮತ್ತೋರ್ವ ಫಲಾನುಭವಿಯಾದ

ಶ್ರೀಮತಿ ಜಿ.ಸರಿತಾರವರಿಗೂ ಸಹ 2011-12ರಲ್ಲಿ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಮನೆ ಮಂಜೂರಾಗಿದ್ದು, ಸದರಿ ಶ್ರೀಮತಿ ಜಿ.ಸರಿತಾರವರು ಮನೆ ನಿರ್ಮಿಸದಿದ್ದರೂ ಸಹ ಅವರಿಗೆ ನೀವು ಎಂದರೆ ಎರಡನೆಯ ಆಪಾದಿತ ಸರ್ಕಾರಿ ನೌಕರರು ರೂ.35,000/-ಗಳನ್ನು ಸಹಾಯಧನವಾಗಿ ಮಂಜೂರು ಮಾಡಿ, ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿದ್ದು, ನೀವುಗಳಿಬ್ಬರು ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ii) ಮತ್ತು (iii)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

**ಅನುಬಂಧ-2**

**ದೋಷರೋಪಣೆಯ ವಿವರ**

5) ದೂರುದಾರರಾದ ಶ್ರೀ ಗೌಳಿ ಈರಣ್ಣ ಬಿನ್ ತಿಪ್ಪಣ್ಣ ಮತ್ತು ಇತರರು, ಗೋವೇರಹಳ್ಳಿ ಗ್ರಾಮ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆರವರು ತಮ್ಮ ದೂರಿನಲ್ಲಿ ತೊಗರಿಕಟ್ಟೆ ಗ್ರಾಮ ಪಂಚಾಯಿತಿಯಲ್ಲಿ ಉದ್ಯೋಗ ಖಾತ್ರಿ ಕೆಲಸ ಮಾಡಿರುವುದು ನ್ಯಾಯವಾಗಿಲ್ಲ, ಕಳಪೆ ಕಾಮಗಾರಿ ಅರ್ಧಂಬರ್ಧ ಮನೆ ಕೆಲಸ ಪೂರೈಸಿ ಬಿಲ್ಲು ಮಾಡಿರುತ್ತಾರೆ, ಮಡ್ಡಿ ಕೆಂಚಮ್ಮ ಕೋಂ ಬೀರಪ್ಪ ಗೋವೇರಹಳ್ಳಿರವರಿಗೆ ಮನೆ ಮಂಜೂರಾಗಿದ್ದು, ಮನೆ ಕಟ್ಟಡ ಕಟ್ಟದಿದ್ದರೂ 2 ವರ್ಷಗಳ ಹಿಂದೆ ಮನೆ ಪೂರ್ಣಗೊಳಿಸಿದಂತೆ ದಾಖಲಿಸಿ ಬಿಲ್ ಮಾಡಿ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ ಹಾಗೂ ಗೌಳಿ ಸರಿತಾ ಕೋಂ ಶಿವಕುಮಾರ್‌ರವರಿಗೂ ಸಹ ಮನೆ ಮಂಜೂರಾಗಿದ್ದು, ಸದರಿ ಫಲಾನುಭವಿಯು ಮನೆ ಕಟ್ಟದಿದ್ದರೂ ಸಹ ರೂ.40,000/- ಹಣ ಡ್ರಾ ಮಾಡಿದ್ದರೂ ಫಲಾನುಭವಿಗೆ ಪಾವತಿಸಿಲ್ಲ. ಮುಂದುವರೆದು, 2012-13ರಲ್ಲಿ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಕೆಂಚಮ್ಮ ಕೋಂ ನಿಂಗಪ್ಪರವರಿಗೆ ಮನೆ ಮಂಜೂರಾಗಿದ್ದು, ಸದರಿಯವರ ಹೆಸರು ಗ್ರಾಮದ ಮತದಾರರ ಪಟ್ಟಿಯಲ್ಲಿರುವುದಿಲ್ಲ ಹಾಗೂ ಸದರಿಯವರ ಹೆಸರಿನಲ್ಲಿ 2013-14ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಲ್ಲೂ ಸಹ ಮನೆ ಮಂಜೂರು ಮಾಡಿರುತ್ತಾರೆ. 2010-11ನೆಯ ಸಾಲಿನಲ್ಲಿ ಎಂ.ದುರ್ಗಮ್ಮ ಕೋಂ ಹನುಮಂತಪ್ಪರವರಿಗೆ ಇಂದಿರಾ ಆವಾಜ್ ಯೋಜನೆಯಲ್ಲಿ ಮನೆ ಮಂಜೂರಾಗಿದ್ದು ಫಲಾನುಭವಿಯು ಮನೆ ಕಟ್ಟಿಕೊಂಡಿದ್ದು, ಸದರಿಯವರಿಗೆ 2 ಕಂತುಗಳಲ್ಲಿ ಹಣ ಪಾವತಿಸಿದ್ದು, ಉಳಿದ ಇನ್ನೊಂದು ಕಂತಿನ ಹಣ ಬಗ್ಗೆ ಕೇಳಿದರೆ

ಮಂಜೂರಾಗಿಲ್ಲವೆಂದು ಹಾಗೂ ಕುಡಿಯುವ ನೀರಿನ ಪೈಪ್‌ಲೈನ್ ಕೆಲಸ ಮುಗಿದಿಲ್ಲ ಹಾಗೂ ಪೈಪುಗಳ ಗುಣಮಟ್ಟ ಸರಿಯಿಲ್ಲ ಎಂದು ಆಪಾದಿಸಿರುತ್ತಾರೆ.

ಸದರಿ ಆಪಾದನೆಗಳಿಗೆ ಸಂಬಂಧಿಸಿದಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆರವರಿಗೆ ತನಿಖೆ ಮಾಡಿ ತನಿಖಾ ವರದಿಯನ್ನು ಸಲ್ಲಿಸುವಂತೆ ಸೂಚಿಸಿದ್ದು, ಸದರಿ ಅಧಿಕಾರಿಯವರ ಆದೇಶದಂತೆ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆರವರು ತನಿಖೆ ನಡೆಸಿ ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ.

1) ಶ್ರೀಮತಿ ಮಡ್ಡಿಕೆಂಚಮ್ಮರವರು 2010–11ನೆಯ ಸಾಲಿನಲ್ಲಿ ಬಸವ ಇಂದಿರಾ ವಸತಿ ಯೋಜನೆಯಡಿಯಲ್ಲಿ ಮಂಜೂರಾಗಿದ್ದ ಮನೆಯನ್ನು ಪೂರ್ಣವಾಗಿ ನಿರ್ಮಾಣ ಮಾಡದೆ ಇದ್ದರೂ ಸಂಪೂರ್ಣ ಅನುದಾನವನ್ನು ಒಂದನೆಯ ಆಪಾದಿತ ಸರ್ಕಾರಿ ನೌಕರರು ಬಿಡುಗಡೆ ಮಾಡುವುದರ ಮೂಲಕ ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ.
2) 2010–11ನೆಯ ಸಾಲಿನಲ್ಲಿ ಬಸವ ಇಂದಿರಾ ವಸತಿ ಯೋಜನೆಯಡಿಯಲ್ಲಿ ಶ್ರೀಮತಿ ಗೌಳಿ ಸರಿತಾರವರಿಗೆ ಮನೆ ಮಂಜೂರಾಗಿದ್ದು, ಆದರೆ ಫಲಾನುಭವಿಯು ಮನೆ ನಿರ್ಮಾಣ ಮಾಡದೆ ಇದ್ದರೂ ಎರಡನೆಯ ಆಪಾದಿತ ಸರ್ಕಾರಿ ನೌಕರರು ಸಹಾಯಧನ ಮಂಜೂರು ಮಾಡಿ, ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ.
3) ಶ್ರೀಮತಿ ದುರ್ಗಮ್ಮರವರು ಮನೆ ನಿರ್ಮಾಣ ಮಾಡದೆ ಇದ್ದರೂ ಎರಡು ಕಂತು ಅನುದಾನ ಬಿಡುಗಡೆ ಮಾಡಿದ್ದು, ಉಳಿದ ಕಂತಿನ ಬಗ್ಗೆ ಒಂದನೆಯ ಆಪಾದಿತ ಸರ್ಕಾರಿ ನೌಕರರು ಯಾವುದೇ ಮಾಹಿತಿ ಸಲ್ಲಿಸಿರುವುದಿಲ್ಲ.

ದೂರು ಮತ್ತು ಆಪಾದಿತ ಸರ್ಕಾರಿ ನೌಕರರು ಸಲ್ಲಿಸಿದಂತಹ ಆಕ್ಷೇಪಣೆ, ತನಿಖಾಧಿಕಾರಿಯವರ ತನಿಖಾ ವರದಿ ಹಾಗೂ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ, ಆಪಾದಿತ ಸರ್ಕಾರಿ ನೌಕರರಾದ ನೀವು ಎಸಗಿರುವ ಕೃತ್ಯವು ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966ರಡಿ ನಿಯಮ 3(1) (ii) ಮತ್ತು (iii)ರಡಿಯಲ್ಲಿ ದುರ್ವರ್ತನೆ ಮಾಡಿದ್ದಾರೆಂದು ಕಂಡುಬಂದಿದ್ದರಿಂದ, ಎದುರುದಾರರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ವರದಿಯನ್ನು ಸಲ್ಲಿಸಿ, ನಿಮ್ಮ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸಲು

ತಿಳಿಸಲಾಗಿತ್ತು. ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಯಿಂದ ಮಾಡಿರುವ ಶಿಫಾರಸ್ಸನ್ನು ಒಪ್ಪಿ ನಿಮ್ಮ ವಿರುದ್ಧ ಶಿಸ್ತು ಕ್ರಮಕೈಗೊಂಡು ವರದಿಯನ್ನು ಸಲ್ಲಿಸುವಂತೆ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಲಾಗಿರುತ್ತದೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

6) ಈ ಮೇಲ್ಕಂಡ ದೋಷಾರೋಪಣೆ (Article of charge)ಅನ್ನು ಆ.ಸ.ನೌ–1 ಮತ್ತು ಆ.ಸ.ನೌ–2ರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ, ಆ.ಸ.ನೌ–1 ಮತ್ತು ಆ.ಸ.ನೌ–2ರವರು ದಿನಾಂಕ: 27/09/2017ರಂದು ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆ (First Oral Statement) ನಿಯಮ 11(9) ಕೆಸಿಎಸ್ (ಸಿಸಿಎ) ರೂಲ್ಸ್ 1957ರಡಿಯಲ್ಲಿ ದಾಖಲಿಸಲಾಗಿರುತ್ತದೆ.

7) ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

8) ಆ.ಸ.ನೌ–1ರವರು ತಮ್ಮ ರಕ್ಷಣಾ ಹೇಳಿಕೆಯಲ್ಲಿ ವಿವರಿಸುವುದೇನೆಂದರೆ, ತೊಗರಿಕಟ್ಟೆ ಗ್ರಾಮದಲ್ಲಿ ಪಿ.ಡಿ.ಓ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ತಾನು ಪ್ರಮಾಣಿಕವಾಗಿ ಮತ್ತು ಹಣ ದುರುಪಯೋಗ ಪಡಿಸಿಕೊಳ್ಳದೇ ಕರ್ತವ್ಯ ನಿರ್ವಹಿಸಿರುವುದಾಗಿ ಹೇಳಿರುತ್ತಾರೆ. ತನ್ನ ವಿರುದ್ಧ ಮಾಡಿರುವ ದೋಷಾರೋಪಣೆ ಸುಳ್ಳಿರುತ್ತದೆಂದು ಹೇಳಿರುತ್ತಾರೆ. ಪ್ರಸ್ತುತ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿರುವುದಾಗಿ ಕಾರಣ, ತನ್ನ ವಿರುದ್ಧದ ಆರೋಪದಿಂದ ಬಿಡುಗಡೆ ಮಾಡುವಂತೆ ವಿನಂತಿಸಿರುತ್ತಾರೆ. ಮುಂದುವರೆದು, ಯಾವುದೇ ರೀತಿಯ ಹಣ ಡ್ರಾ ಮಾಡುವಾಗ ಚೆಕ್ ಮುಖಾಂತರವೇ ಪಡೆಯಬೇಕಾಗಿರುತ್ತದೆಂದು ಹಾಗೂ ಯಾವುದೇ ನಗದು ವ್ಯವಹಾರಕ್ಕೆ ಅವಕಾಶವಿರುವುದಿಲ್ಲವೆಂದು ಹೇಳಿರುತ್ತಾರೆ. ತಾನು ಫಲಾನುಭವಿಯ ಹೆಸರಿನಲ್ಲಿ ಚೆಕ್ ಮುಖಾಂತರವೇ ನೀಡಿರುವುದಾಗಿ ಆದರೆ, ಅಧಿಕಾರಿಗಳ ಹೆಸರಿನಲ್ಲಿ ಹಣ ನೀಡಿರುವುದಿಲ್ಲವಾದ್ದರಿಂದ ತನ್ನನ್ನು ಈ ಆರೋಪದಿಂದ ವಿಮುಕ್ತಿಗೊಳಿಸುವಂತೆ ವಿನಂತಿಸಿರುತ್ತಾರೆ.

9) ಆ.ಸ.ನೌ–2ರವರು ತಮ್ಮ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿಲ್ಲ(**not filed**) ಎಂದು ದಿನಾಂಕ 03/03/2018ರಂದು ಆದೇಶಿಸಲಾಗಿರುತ್ತದೆ.

10) ಈ ವಿಚಾರಣೆಯಲ್ಲಿ, ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ ಗೌಳಿ ಈರಣ್ಣರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ–1 ಮತ್ತು ನಿ.ಪಿ–2ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಶ್ರೀ ಎನ್.ಲಿಂಗಾರೆಡ್ಡಿರವರನ್ನು ಪಿ.ಡಬ್ಲ್ಯು.2 ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ–3 ಮತ್ತು ನಿಪಿ–4 ದಾಖಲೆಯನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯಾದ ಶ್ರೀ ಎಸ್.ಸಿ.ಮಂಜಪ್ಪ, ನಿವೃತ್ತ ಆರಕ್ಷಕ ಅಧೀಕ್ಷಕರವರನ್ನು ಪಿ.ಡಬ್ಲ್ಯು–3 ಎಂದು ಸಾಕ್ಷಿ ನುಡಿಸಿಕೊಂಡು, ನಿಪಿ–5 ರಿಂದ ನಿಪಿ–11 ದಾಖಲೆಯನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

11) ವಿಚಾರಣಾ ಪ್ರಾಧಿಕಾರದ ಪರವಾಗಿ ಮೌಖಿಕ ಮತ್ತು ದಸ್ತಾವೇಜುಗಳನ್ನು ಗುರುತಿಸಿಕೊಂಡ ನಂತರ, ದಿನಾಂಕ 29/08/2019ರಂದು ಆ.ಸ.ನೌ–1 ಮತ್ತು 2ರವರ ದ್ವಿತೀಯ ಮೌಖಿಕ ಹೇಳಿಕೆ (Second Oral Statement)ಅನ್ನು ತೆಗೆದುಕೊಳ್ಳಲಾಗಿರುತ್ತದೆ.

12) ಆ.ಸ.ನೌ–1 ರವರು ತಮ್ಮ ಪರವಾಗಿ ತಾನು ಡಿ.ಡಬ್ಲ್ಯು.1 ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು, ನಿ.ಡಿ–1 ರಿಂದ ನಿಡಿ–06 ಎಂದು ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ತಮ್ಮ ಪರವಾಗಿ ಮತ್ತೊಬ್ಬ ಸಾಕ್ಷಿ ಶ್ರೀಮತಿ ಮಡ್ಡಿಕೆಂಚಮ್ಮ ಗಂಡ ಭೀರಪ್ಪರವರನ್ನು ಡಿ.ಡಬ್ಲ್ಯು–2 ಎಂದು ಸಾಕ್ಷಿ ನುಡಿಸಿಕೊಂಡಿರುತ್ತಾರೆ.

13) ಉಭಯ ಪಕ್ಷಗಾರರ ಪರವಾಗಿ ವಾದವಿವಾದವನ್ನು ಆಲಿಸಲಾಯಿತು ಮತ್ತು ಆ.ಸ.ನೌರವರ ಪರ ವಕೀಲರು ಸಲ್ಲಿಸಿದ ಲಿಖಿತ ವಾದಾಂಶವನ್ನು ಪರಿಶೀಲಿಸಲಾಯಿತು.

14) **ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.**

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ–1 ಮತ್ತು ಆ.ಸ.ನೌ–2ರವರುಗಳ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

15) ವಾದವಿವಾದ ಆಲಿಸಿದ ನಂತರ ಕಡತವನ್ನು ಪರಿಶೀಲಿಸಲಾಯಿತು, ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ–1)** ಸಕಾರಾತ್ಮಕವಾಗಿ.

**ಅಂಶ–2)** ಅಂತಿಮ ಆದೇಶದಂತೆ.

## ಕಾರಣಗಳು

**16)** **ಅಂಶ–1:** ಈ ಪ್ರಕರಣದಲ್ಲಿ, ಆ.ಸ.ನೌ–1 ಮತ್ತು ಆ.ಸ.ನೌ–2ರವರುಗಳ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಪ್ರಕರಣದ ದೂರುದಾರರಾದ ಶ್ರೀ ಗೌಳಿ ಈರಣ್ಣರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ–1 ಮತ್ತು ನಿಪಿ–2 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ–1 ದಾಖಲೆಯು ಪ್ರಪತ್ರ–1 ಮತ್ತು ನಿಪಿ–2 ದಾಖಲೆಯು ಪ್ರಪತ್ರ–2 ಇರುತ್ತದೆ. ಶ್ರೀ.ಎಸ್.ಸಿ.ಮಂಜಪ್ಪ, ತನಿಖಾಧಿಕಾರಿಯವರನ್ನು ಪಿ.ಡಬ್ಲ್ಯು.2 ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ–3 ರಿಂದ ನಿಪಿ–11 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಿಪಿ–3 ದಾಖಲೆಯು ತನಿಖಾ ವರದಿಯಾಗಿದ್ದು, ನಿಪಿ–4 ದಾಖಲೆಯು, ಪಿ.ಡಬ್ಲ್ಯು–2ರವರು ಸಲ್ಲಿಸಿದ ವರದಿ ಇರುತ್ತದೆ. ನಿಪಿ–5 (62 ಪುಟಗಳು) ದಾಖಲೆಯು ವರದಿಯೊಂದಿಗೆ ಸಲ್ಲಿಸಿದ ದಾಖಲಾತಿಗಳಿರುತ್ತವೆ. ನಿಪಿ–6 (9 ಫೋಟೋಗಳು) ಸ್ಥಳ ಪರಿಶೀಲನೆ ಕಾಲಕ್ಕೆ ತೆಗೆದ ಛಾಯಾಚಿತ್ರಗಳಿರುತ್ತವೆ. ನಿಪಿ–7 (4 ಪುಟಗಳು) ತನಿಖಾ ಸಮಯದಲ್ಲಿ ಪಡೆದ ಹೇಳಿಕೆಗಳು. ನಿಪಿ–8 ಆ.ಸ.ನೌ.ರವರುಗಳ ಸೇವಾ ಮಾಹಿತಿ, ನಿಪಿ–9(2 ಫೋಟೋಗಳು) ಫಲಾನುಭವಿಯಾದ ಶ್ರೀಮತಿ ಮಡ್ಡಿಕೆಂಚಮ್ಮ ಮತ್ತು ಶ್ರೀಮತಿ ದುರ್ಗಮ್ಮರವರು ಇರುವ ಛಾಯಾಚಿತ್ರಗಳು, ನಿಪಿ–10 ಫಲಾನುಭವಿಯಾದ ಶ್ರೀಮತಿ ಕೆಂಚಮ್ಮ ಗಂಡ ನಿಂಗಪ್ಪರವರ ಖಾಲಿ ನಿವೇಶನದ ಫೋಟೋ ಇರುತ್ತವೆ. ನಿಪಿ–11 ಫಲಾನುಭವಿಯಾದ ಶ್ರೀಮತಿ ದುರ್ಗಮ್ಮರವರು ಇರುವ ಫೋಟೋ ಇರುತ್ತವೆ.

17) ದೂರುದಾರರ ಆಪಾದನೆ ಮತ್ತು ಆ.ಸ.ನೌರವರುಗಳ ವಿರುದ್ಧ ರಚಿಸಲಾದ ದೋಷಾರೋಪಣೆ ಏನೆಂದರೆ, ಈ ಆ.ಸ.ನೌರವರುಗಳು ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ತೊಗರಿಕಟ್ಟೆ ಗ್ರಾಮ ಪಂಚಾಯತಿಯಲ್ಲಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, **2010–11ನೇ** ಸಾಲಿನ ಬಸವ ಇಂದಿರಾ ವಸತಿ

ಯೋಜನೆಯಡಿಯಲ್ಲಿ ಫಲಾನುಭವಿಯಾದ **ಶ್ರೀಮತಿ ಮಡ್ಡಿಕೆಂಚಮ್ಮ ಕೋಂ ವೀರಪ್ಪ** ರವರಿಗೆ ಮನೆ ಮಂಜೂರಾಗಿದ್ದು, ಅವರು ಮನೆ ನಿರ್ಮಿಸದಿದ್ದರೂ ಸಹ, ಅವರಿಗೆ ಆ.ಸ.ನೌ–1ರವರು ರೂ.49,500/– ಸಹಾಯಧನ ಮಂಜೂರು ಮಾಡಿ, ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುವುದಾಗಿ, ಮತ್ತೊರ್ವ ಫಲಾನುಭವಿಯಾದ **ಶ್ರೀಮತಿಜಿ.ಸರಿತಾರವರಿಗೂ** ಸಹ, **2011–12ನೇ ಸಾಲಿನಲ್ಲಿ,** ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಮನೆ ಮಂಜೂರಾಗಿದ್ದು, ಸದರಿ ಜಿ.ಸರೀತಾರವರು ಮನೆ ನಿರ್ಮಿಸದಿದ್ದರೂ ಸಹ ಅವರಿಗೆ, ಈ ಆ.ಸ.ನೌ–2ರವರು ರೂ.35,000/–ಗಳನ್ನು ಸಹಾಯಧನವಾಗಿ ಮಂಜೂರು ಮಾಡಿ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡು ದುರ್ನಡತೆ ಎಸಗಿ, ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡಿರುವುದಾಗಿ ಆಪಾದಿಸಲಾಗಿರುತ್ತದೆ.

20) ಶಿಸ್ತು ಪ್ರಾಧಿಕಾರವು ಆ.ಸ.ನೌ–1 ಮತ್ತು 2ರವರ ಮೇಲೆ ರಚಿಸಲಾದ ಆರೋಪವನ್ನು ರುಜುವಾತುಪಡಿಸಲು ನೀಡಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು. ದೂರುದಾರರಾದ ಶ್ರೀ ಗೌಳಿ ಈರಣ್ಣರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಕೆಳಕಂಡಂತೆ ನುಡಿದಿರುತ್ತಾರೆ.

> **"ಮಿಕ್ಕುಳಿದ 2 ಮನೆಗಳನ್ನು ನಿರ್ಮಿಸದೇ ಆ ಸಂಬಂಧ ಬಿಡುಗಡೆಯಾಗಿದ್ದ ಹಣವನ್ನು 1ನೇಯ ಮತ್ತು 2ನೇಯ ಆಪಾದಿತ ಸರ್ಕಾರಿ ನೌಕರರು ಲಪಟಾಯಿಸಿರುತ್ತಾರೆ".**
>
> **"ಶ್ರೀಮತಿ ಮಡ್ಡಿಕೆಂಚಮ್ಮ ಎಂಬುವರು ಮನೆಯನ್ನು ಕಟ್ಟದೇ ಇದ್ದರೂ ಸಹ ಅವರಿಗೆ ಹಣ ಕೊಡಲಾಯಿತು. ಜಿ.ಸರಿತಾ ಎಂಬುವರು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಕಮಲಾಪುರ ಎಂಬ ಸ್ಥಳದ ನಿವಾಸಿಯಾಗಿದ್ದು, ಅವರಿಗೂ ಸಹ ಮನೆ ಮಂಜೂರಾಗಿದ್ದು, ಅವರು ಮನೆಯನ್ನು ಕಟ್ಟಿಲ್ಲ ಮತ್ತು ಅವರಿಗೆ ಹಣ ಕೊಡಲಾಗಿದೆ."**

ಈ ಮೇಲ್ಕಂಡಂತೆ ನುಡಿದಿರುವುದನ್ನು ಪರಿಶೀಲಿಸಿದಾಗ, ದೂರಿನಲ್ಲಿ ಕಾಣಿಸಿದಂತೆ ಮತ್ತು ದೋಷಾರೋಪಣೆಯಲ್ಲಿ ಹೇಳಲಾದಂತೆ ಈ ಆ.ಸ.ನೌರವರುಗಳು ಫಲಾನುಭವಿಯಾದ ಶ್ರೀಮತಿ ಮಡ್ಡಿಕೆಂಚಮ್ಮ ಮತ್ತು ಜಿ.ಸರಿತಾ ಎಂಬುವವರು ಮನೆ ನಿರ್ಮಿಸದಿದ್ದರೂ ಸಹ, ಹಣ ನೀಡಿರುವುದಾಗಿ ಸ್ಪಷ್ಟವಾಗಿ ನುಡಿದಿರುತ್ತಾರೆ. ಅಲ್ಲದೇ, ಈ ದೂರುದಾರರು ತಮ್ಮ ಪಾಟೀ

ಸವಾಲಿನಲ್ಲಿಯೂ ಸಹ 1ನೇ ಆ.ಸ.ನೌರವರು ಹಣವನ್ನು ದುರುಪಯೋಗ ಮಾಡಿರುವ ಬಗ್ಗೆ ನುಡಿದಿರುತ್ತಾರೆ.

21) ಶಿಸ್ತು ಪ್ರಾಧಿಕಾರವು ಮುಂದುವರೆದು ದಾವಣಗೆರೆ ಲೋಕಾಯುಕ್ತ ಆರಕ್ಷಕ ಅಧೀಕ್ಷಕರಾಗಿದ್ದ ಶ್ರೀ ಎನ್.ಲಿಂಗಾರೆಡ್ಡಿರವರನ್ನು ಪಿ.ಡಬ್ಲ್ಯು–2 ಎಂದು ಸಾಕ್ಷಿ ನುಡಿಸಿಕೊಂಡಿದ್ದು, ಇವರು ಈ ಲೋಕಾಯುಕ್ತ ಸಂಸ್ಥೆಯಿಂದ ತನಿಖೆಗಾಗಿ ನಿರ್ದೇಶಿಸಲಾದ ಪಿರ್ಯಾದಿಯನ್ನು ಆಗಿನ ಲೋಕಾಯುಕ್ತ ಆರಕ್ಷಕ ಉಪಾಧೀಕ್ಷಕರಾದ ಶ್ರೀ ಎಸ್.ಸಿ.ಮಂಜಪ್ಪ/ಪಿಡಬ್ಲ್ಯು–3ರವರಿಗೆ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಆದೇಶಿಸಿದ್ದಾಗಿ ಹಾಗೂ ಸದರಿ ನಿರ್ದೇಶನದಂತೆ ಶ್ರೀ ಎಸ್.ಸಿ.ಮಂಜಪ್ಪರವರು ತನಿಖೆ ಮಾಡಿ ತನಗೆ ದಿನಾಂಕ 26/11/2014ರಂದು ನಿಪಿ–3ರಂತೆ ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ನು ಈ ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿರುವ ಬಗ್ಗೆ ನುಡಿದಿರುತ್ತಾರೆ. ಸದರಿ ವರದಿಯನ್ವಯ ತಾನು ಪ್ರತ್ಯೇಕವಾಗಿ ನಿಪಿ–4ರಂತೆ ಈ ಸಂಸ್ಥೆಗೆ ವರದಿ ಸಲ್ಲಿಸಿರುವ ಬಗ್ಗೆ ನುಡಿದಿರುತ್ತಾರೆ. ಈ ಸಾಕ್ಷಿದಾರರಿಗೆ ಆ.ಸ.ನೌ.ರವರ ಪರ ವಕೀಲರು ಪಾಟೀ ಸವಾಲಿನಲ್ಲಿ ಈ ಆ.ಸ.ನೌ.ರವರುಗಳು ಯಾವುದೇ ಅಕ್ರಮವನ್ನು ಎಸಗಿಲ್ಲ ಎಂದು ಸೂಚಿಸಿದ್ದನ್ನು ನಿರಾಕರಿಸಿರುತ್ತಾರೆ.

22) ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತನಿಖಾಧಿಕಾರಿಯಾದ ಶ್ರೀ ಎಸ್.ಸಿ.ಮಂಜಪ್ಪ/ಪಿಡಬ್ಲ್ಯು–3ರವರ ಸಾಕ್ಷ್ಯ ನುಡಿಸಿದ್ದು, ಇವರು ಈ ಪ್ರಕರಣದ ತನಿಖೆಯನ್ನು ನಿರ್ವಹಿಸಿ ನಿಪಿ–3 ವರದಿ ಮಾಡಿರುವ ಬಗ್ಗೆ ನುಡಿದಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ರೀತಿ ನುಡಿದಿರುತ್ತಾರೆ.

> **"ನಾನು ದಿನಾಂಕ 07/11/2014ರಂದು ತೊಗರಿಕಟ್ಟೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಗೋವೇರಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ದೂರಿನಲ್ಲಿ ನಮೂದಿಸಿರುವ ಆಪಾದನೆಗಳ ಕುರಿತು ಸದರಿ ಗ್ರಾಮದಲ್ಲಿ, ಗ್ರಾಮಪಂಚಾಯತಿಯ ಕರ ವಸೂಲಿಗಾರರಾದ ತಿಪ್ಪೇಶಿ ಇವರೊಂದಿಗೆ ಮಡ್ಡಿ ಕೆಂಚಮ್ಮ ಇವರ ಮನೆಯ ಹತ್ತಿರ ಹೋಗಿ ಪರಿಶೀಲಿಸಲಾಗಿ, 2010–11ನೇ ಸಾಲಿನಲ್ಲಿ, ಇಂದಿರಾ ವಸತಿ ಯೋಜನೆಯಡಿಯಲ್ಲಿ ಇವರಿಗೆ ಮನೆ ಮಂಜೂರಾಗಿದ್ದು, ಸದರಿಯವರು ಹರಪನಹಳ್ಳಿ ಎಸ್.ಬಿ.ಎಂ. ಖಾತೆ ನಂ.64086997983ಕ್ಕೆ ದಿನಾಂಕ 11/01/2012ರಂದು ರೂ.25,000/–ಗಳನ್ನು ಮತ್ತು ರೂ.12,500/–ಗಳನ್ನು ಹಾಗೂ ದಿನಾಂಕ 28/01/2012 ರಂದು ರೂ.12,000/–ಗಳನ್ನು ಒಟ್ಟು ರೂ.49,500/–ಗಳನ್ನು ಇವರ ಖಾತೆಗೆ ಜಮಾ ಆಗಿರುತ್ತದೆ. ಆದರೆ, ಸ್ಥಳ**

ಪರಿಶೀಲನೆಯ ಸಂದರ್ಭದಲ್ಲಿ ಮಡ್ಡಿ ಕೆಂಚಮ್ಮ ಗಂಡ ಬೀರಪ್ಪ ಇವರು ಅಡಿಪಾಯವನ್ನು ಹಾಕಿರುವುದು ಮಾತ್ರ ಕಂಡು ಬಂದಿರುತ್ತದೆ. ಯಾವುದೇ ಮನೆ ನಿರ್ಮಾಣ ಮಾಡಿರುವುದಿಲ್ಲ".

"ಸದರಿ ಗ್ರಾಮದ, ಇನ್ನೊಬ್ಬರು ಫಲಾನುಭವಿಯಾದ ಶ್ರೀಮತಿ ಜಿ.ಸರೀತಾ ಗಂಡ ಶಿವಕುಮಾರ್ ಇವರಿಗೆ 2011-12ರಲ್ಲಿ, ಇಂದಿರಾ ಆವಾಜ್ ಅಡಿಯಲ್ಲಿ ಮನೆ ಮಂಜೂರಾಗಿದ್ದು, ಅವರಿಗೆ ದಿನಾಂಕ 20/03/2012ರಂದು ರೂ.10,000/-ಗಳು, ದಿನಾಂಕ 11/05/2012 ರಂದು ರೂ.15,000/-, ಹಾಗೂ ದಿನಾಂಕ 18/09/2012ರಂದು ರೂ.10,000/-ಗಳನ್ನು ಚೆಕ್‌ಮೂಲಕ ನೀಡಲಾಗಿರುತ್ತದೆ. ಆದರೆ, ಸ್ಥಳ ಪರಿಶೀಲನೆಯ ಸಮಯದಲ್ಲಿ, ಶ್ರೀಮತಿ ಜಿ.ಸರೀತಾ ಇವರು ಮನೆ ನಿರ್ಮಾಣ ಮಾಡಿರುವುದು ಕಂಡು ಬಂದಿರುವುದಿಲ್ಲ. ಅಲ್ಲದೆ ಚೆಕ್‌ಗಳನ್ನು ಇವರ ಮಾವ, ಲೇಟ್ ಯಲ್ಲಪ್ಪ ಇವರಿಗೆ ನೀಡಿ ಸಹಿ ಪಡೆದುಕೊಂಡಿರುವುದು ದಾಖಲಾತಿಗಳಿಂದ ತಿಳಿದು ಬಂದಿರುತ್ತದೆ. ಸದರಿಯವರಿಗೆ ಸಹಾಯಧನ ಮಂಜೂರಾತಿ ಅವಧಿಯಲ್ಲಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿ ಶ್ರೀ ಎಂ.ಕೆ.ರಮೇಶ್ ಹಾಗೂ ಶ್ರೀ ಮಂಜಪ್ಪ ಇವರು ಕರ್ತವ್ಯ ನಿರ್ವಹಿಸಿರುತ್ತಾರೆ".

"ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಇನ್ನೊಬ್ಬ ಫಲಾನುಭವಿಯಾದ ಶ್ರೀ ದುರ್ಗಮ್ಮ ಗಂಡ ಹನುಮಂತಪ್ಪ ಇವರಿಗೆ 2008-09ರಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮನೆ ಮಂಜೂರಾಗಿದ್ದು, ಪರಿಶೀಲನಾ ಸಮಯದಲ್ಲಿ ಮನೆ ಸಂಪೂರ್ಣ ನಿರ್ಮಾಣಗೊಂಡಿದ್ದು, ಇವರಿಗೆ ದಿನಾಂಕ 05/04/2010ರಂದು ಮತ್ತು ದಿನಾಂಕ: 28/05/2011ರಂದು ತಲಾ ರೂ.10,000/-ಗಳ ಧನ ಸಹಾಯಕ ಮಂಜೂರಾಗಿರುವುದು ಅವರ ಬ್ಯಾಂಕ್ ಖಾತೆಯ ನಕಲಿನ ಪರಿಶೀಲನೆಯಿಂದ ಕಂಡು ಬಂದಿರುತ್ತದೆ. ಉಳಿದ ಸಹಾಯಧನ ಮಂಜೂರಾಗಿರುವುದಿಲ್ಲ"

ಈ ಮೇಲ್ಕಂಡಂತೆ ತನಿಖಾಧಿಕಾರಿ ಮೌಖಿಕ ಸಾಕ್ಷ್ಯ ನುಡಿದಿರುವುದನ್ನು ಪರಿಶೀಲಿಸಿದಾಗ, ಯೋಜನೆಯಲ್ಲಿ ಹೇಳಲಾದಂತೆ ಮನೆ ಕಾಮಗಾರಿ ಸಂಪೂರ್ಣಗೊಳ್ಳದೇ ಇದ್ದಾಗಿಯೂ, ಈ ಆ.ಸ.ನೌ.ರವರುಗಳು ದೋಷಾರೋಪಣೆಯಲ್ಲಿ ಹೇಳಲಾದಂತೆ ಶ್ರೀಮತಿ ಮಡ್ಡಿಕೆಂಚಮ್ಮರವರಿಗೆ ರೂ.49,500/- ಹಾಗೂ ಜಿ.ಸರಿತಾರವರಿಗೆ ರೂ.35,000/-ಗಳನ್ನು ನೀಡಿರುವುದು

ಕಂಡುಬಂದಿರುವುದಾಗಿ ನುಡಿದಿರುತ್ತಾರೆ. ಅಲ್ಲದೇ, ಸದರಿ ಸಹಾಯಧನ ಮಂಜೂರಾತಿ ಅವಧಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿ ಶ್ರೀ ಎಂ.ಕೆ.ರಮೇಶ್ **(ಆ.ಸ.ನೌ–1)** ಮತ್ತು ಶ್ರೀ ಮಂಜಪ್ಪ **(ಆ.ಸ.ನೌ–2)**ರವರು ಕರ್ತವ್ಯ ನಿರ್ವಹಿಸಿರುವುದಾಗಿಯೂ ಸ್ಪಷ್ಟವಾಗಿ ನುಡಿದಿರುತ್ತಾರೆ. ಈ ರೀತಿ ತನಿಖಾಧಿಕಾರಿ ನುಡಿದಿರುವ ಸಾಕ್ಷ್ಯವು ದೂರುದಾರರು ದೂರಿನಲ್ಲಿ ಆಪಾದಿಸಿರುವ ಅಂಶಗಳಿಗೆ ಪೂರಕವಾಗಿರುವುದು ಕಂಡು ಬರುತ್ತದೆ. ತನಿಖಾಧಿಕಾರಿ/ಪಿಡಬ್ಲ್ಯು–3ರವರ ಪಾಟೀ ಸವಾಲು ವಿಚಾರಣೆಯನ್ನು ಪರಿಶೀಲಿಸಿದಾಗಲೂ ಮನೆ ನಿರ್ಮಾಣವಾದ ನಂತರವೇ ಹಣ ಮಂಜೂರು ಮಾಡಿರುತ್ತಾರೆ ಎಂಬ ಬಗ್ಗೆ ನುಡಿಸುವಲ್ಲಿ ವಿಫಲರಾಗಿರುತ್ತಾರೆ.

23) ಶಿಸ್ತು ಪ್ರಾಧಿಕಾರವು ಗುರುತಿಸಿಕೊಂಡಿರುವ ನಿಪಿ–3 ತನಿಖಾ ವರದಿಯನ್ನು ಪರಿಶೀಲಿಸಿದಾಗ, 2ನೇ ಪುಟದಲ್ಲಿ ಸ್ಪಷ್ಟವಾಗಿ ಕಾಣಿಸಿದ್ದು, ಆ ಪ್ರಕಾರ ಶ್ರೀಮತಿ ಮಡ್ಡಿಕೆಂಚಮ್ಮರವರಿಗೆ 2010–11ನೇ ಸಾಲಿನಲ್ಲಿ, ಬಸವ ಇಂದಿರಾ ಯೋಜನೆಯಡಿಯಲ್ಲಿ ಮನೆ ಮಂಜೂರಾಗಿದ್ದು, ಸಹಾಯಧನ ಹಣ ಸಹ ಸಂಪೂರ್ಣ ಬಿಡುಗಡೆಯಾಗಿರುತ್ತದೆಂದು ಆದರೆ, ಸ್ಥಳ ಪರಿಶೀಲನೆಯ ಸಮಯದಲ್ಲಿ ಕೇವಲ ಅಡಿಪಾಯ ಹಾಕಿರುವುದು ಮಾತ್ರ ಕಂಡುಬಂದಿರುತ್ತದೆಂದು ಮತ್ತು ಮನೆ ನಿರ್ಮಾಣವಾಗಿರುವುದಿಲ್ಲವೆಂದು ಹೇಳಿರುತ್ತಾರೆ. ಅದೇ ಪ್ರಕಾರ, ಶ್ರೀಮತಿ ಜಿ.ಸರಿತಾ ಗಂಡ ಶಿವಕುಮಾರ್‌ರವರಿಗೆ 2011–12ನೇ ಸಾಲಿನಲ್ಲಿ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಮನೆ ಮಂಜೂರಾಗಿದ್ದು, 3 ಕಂತುಗಳ ಸಹಾಯಧನ ಮಂಜೂರಾಗಿರುತ್ತದೆಂದು ಆದರೆ, ಸ್ಥಳ ಪರಿಶೀಲನೆ ಸಮಯದಲ್ಲಿ ಮನೆ ನಿರ್ಮಾಣ ಮಾಡಿರುವುದು ಕಂಡು ಬಂದಿರುವುದಿಲ್ಲವೆಂದು ಹೇಳಿರುತ್ತಾರೆ. ಅದೇ ಪ್ರಕಾರ, ಶ್ರೀಮತಿ ದುರ್ಗಮ್ಮ ಗಂಡ ಹನುಮಂತಪ್ಪರವರಿಗೆ 2008–09ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮನೆ ಮಂಜೂರಾಗಿದ್ದು, ಪರಿಶೀಲನಾ ಸಮಯದಲ್ಲಿ ಸಂಪೂರ್ಣ ಮನೆ ನಿರ್ಮಾಣವಾಗಿರುವುದು ಕಂಡು ಬಂದಿರುತ್ತದೆಂದು ಆದರೆ, ಶ್ರೀಮತಿ ದುರ್ಗಮ್ಮರವರಿಗೆ ಬರಬೇಕಾದ ಒಟ್ಟು ಸಹಾಯಧನ ರೂ.40,000/–ಗಳ ಪೈಕಿ ಕೇವಲ ರೂ.20,000/– ಮಂಜೂರಾಗಿ ಹಣ ಪಡೆದಿರುವುದಾಗಿ ತಿಳಿಸಿರುತ್ತಾರೆಂದು ಹೇಳಿರುತ್ತಾರೆ. ಸದರಿ ನಿಪಿ–3 ವರದಿಯು ಈಗಾಗಲೇ ಮೇಲೆ ಹೇಳಲಾದ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿರುವುದು ಕಂಡು ಬಂದಿರುತ್ತದೆ.

24) ಈ ಪ್ರಕರಣದಲ್ಲಿ, 2ನೇ ಆ.ಸ.ನೌ.ರವರು ಯಾವುದೇ ರಕ್ಷಣಾತ್ಮಕ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆ.ಸ.ನೌ–1ರವರು ಸಲ್ಲಿಸಿರುವ ರಕ್ಷಣಾ ಹೇಳಿಕೆಯಲ್ಲಿ, ತನ್ನ ವಿರುದ್ಧದ

ಆರೋಪವನ್ನು ನಿರಾಕರಿಸಿದ್ದಾಗಿಯೂ ಶಿಸ್ತು ಪ್ರಾಧಿಕಾರ ನೀಡಿರುವ ಸಾಕ್ಷ್ಯವನ್ನು ಅಲ್ಲಗಳೆಯುವಂತಹ ಸಾಕ್ಷ್ಯ ನೀಡುವಲ್ಲಿ ವಿಫಲರಾಗಿರುತ್ತಾರೆ. ಆ.ಸ.ನೌ–1ರವರು ಡಿ.ಡಬ್ಲ್ಯು–1 ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು, ಫಲಾನುಭವಿಯಾದ ಶ್ರೀಮತಿ ಮಡ್ಡಿಕೆಂಚಮ್ಮರವರು ತನ್ನ ಮುಂದೆ ನಿಡಿ–1ರಂತೆ ಹೇಳಿಕೆ ನೀಡಿರುವುದಾಗಿ ಗುರುತಿಸಿಕೊಂಡಿರುತ್ತಾರೆ. ನಿಡಿ–1 ದಾಖಲೆಯನ್ನು ಈ ಆ.ಸ.ನೌ–1ರವರೇ ಮಾಡಿಕೊಂಡಿರುವುದರಿಂದ ಇದಕ್ಕೆ ಹೆಚ್ಚಿನ ಮಾನ್ಯತೆ ನೀಡಲಾಗುವುದಿಲ್ಲ. ತಾನು ಈ ಪ್ರಕರಣದಲ್ಲಿ ಆ.ಸ.ನೌ ಎಂದು ನಿಶ್ಚಯಿಸಿರುವುದರಿಂದ ತನ್ನ ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಿರುವ ಹೆಚ್ಚಿನ ಸಾಧ್ಯತೆ ಇರುತ್ತದೆ. ನಿಡಿ–2 ಫೋಟೋದ ಜೆರಾಕ್ಸ್ ಪ್ರತಿ ನೀಡಿದ್ದಾಗಿಯೂ ಇದು ದೂರು ಸಲ್ಲಿಸುವ ಕಾಲಕ್ಕೆ ಇದ್ದಿರುವ ಸ್ಥಿತಿಗತಿಯ ಚಿತ್ರಣವಿರುವುದಿಲ್ಲ. ನಿಡಿ–3 ದಾಖಲೆಯು ಶ್ರೀಮತಿ ಮಡ್ಡಿಕೆಂಚಮ್ಮರವರ ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ ಇದ್ದು, ಇದು ಹಣ ಜಮೆಯಾಗಿರುವುದು ತೋರಿಸುತ್ತದೆ. ಈ ಪ್ರಕರಣದಲ್ಲಿ ಮಂಜೂರಾದ ಹಣ ಬಿಡುಗಡೆಯ ಬಗ್ಗೆ ವಿವಾದವಿರುವುದಿಲ್ಲ ಆದರೆ, ಮನೆ ನಿರ್ಮಿಸದೆ ಇದ್ದಾಗಿಯೂ ಈ ಆ.ಸ.ನೌ–1 ಮತ್ತು 2ರವರು ಫಲಾನುಭವಿಗಳ ಹೆಸರಿಗೆ ಹಣ ಮಂಜೂರು ಮಾಡಿ ದುರ್ನಡತೆ ಎಸಗಿರುತ್ತಾರೆಂಬುದು ಆರೋಪವಾಗಿರುತ್ತದೆ. ಕಾರಣ, ನಿಡಿ–4 ಮತ್ತು ನಿಡಿ–5ರ ಮೇಲಿನ ಸವಿಸ್ತಾರವಾದ ಚರ್ಚೆ ಅನವಶ್ಯಕ. ನಿಡಿ–6 ಸಹ ಮತ್ತೊಬ್ಬ ಫಲಾನುಭವಿಯಾದ ಶ್ರೀಮತಿ ದುರ್ಗಮ್ಮರವರ ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ ಇದ್ದು, ಅದರಂತೆ ರೂ.20,000/–ಗಳನ್ನು ಜಮೆ ಮಾಡಿರುವ ಬಗ್ಗೆ ಹೇಳಿರುತ್ತಾರೆ. ಸದರಿ ಸಂಗತಿಯನ್ನೂ ಸಹ, ಈಗಾಗಲೇ ಹೇಳಿರುವಂತೆ ಸಂಪೂರ್ಣ ಹಣ ಪಾವತಿಸಿರುವುದಿಲ್ಲವೆಂಬುದನ್ನು ತೋರಿಸುತ್ತದೆ.

25) ಅ.ಸ.ನೌ–1ರವರು ಫಲಾನುಭವಿಯಾದ ಶ್ರೀಮತಿ ಮಡ್ಡಿಕೆಂಚಮ್ಮರವರನ್ನು ಡಿ.ಡಬ್ಲ್ಯು–2 ಎಂದು ಸಾಕ್ಷಿ ನುಡಿಸಿಕೊಂಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಾನು ರೂ.49,500/–ಗಳನ್ನು ಮನೆ ನಿರ್ಮಾಣದ ಬೇರೆ ಬೇರೆ ಹಂತದಲ್ಲಿ ಪಡೆದುಕೊಂಡಿರುವುದಾಗಿ ಆದರೆ, ಯಾವುದೇ ಹಣದ ಅವ್ಯವಹಾರವಾಗಲೀ ಅಥವಾ ದುರುಪಯೋಗವಾಗಲಿ ಆಗಿರುವುದಿಲ್ಲವೆಂದು ನುಡಿದಿರುತ್ತಾರೆ. ಆದರೆ, ತನ್ನ ಪಾಟೀ ಸವಾಲಿನಲ್ಲಿ ಈ ಕೆಳಕಂಡಂತೆ ನುಡಿದಿರುತ್ತಾರೆ.

**"ನಾನು ಮನೆ ಪೂರ್ಣಗೊಳಿಸದೇ ಇದ್ದಾಗಿಯೂ ಪೂರ್ಣಗೊಂಡಿರುತ್ತದೆ ಎಂದು ರೂ.49,500/–ಗಳನ್ನು ಪಡೆದಿರುತ್ತೇನೆ ಎಂದರೆ ಸರಿ".**

ಈ ರೀತಿ ನುಡಿದಿರುವುದನ್ನು ಪರಿಶೀಲಿಸಿದಾಗ, ಆ.ಸ.ನೌ–1 ರವರು ಮನೆ ಪೂರ್ಣಗೊಳ್ಳದೇ ಇದ್ದಾಗಿಯೂ ರೂ.49,500/–ಗಳನ್ನು ಶ್ರೀಮತಿ ಮಡ್ಡಿಕೆಂಚಮ್ಮರವರಿಗೆ ಮಂಜೂರು ಮಾಡಿ ದುರ್ನಡತೆ ಎಸಗಿರುವುದು ರುಜುವಾತಾಗಿರುತ್ತದೆ. ಆ.ಸ.ನೌ–2ರವರು ಯಾವುದೇ ಸಾಕ್ಷ್ಯ ನೀಡಿರುವುದಿಲ್ಲ. ಅಲ್ಲದೇ, ತನ್ನ ಪರವಾಗಿ ಯಾವುದೇ ರಕ್ಷಣಾತ್ಮಕ ಹೇಳಿಕೆಯನ್ನು ಸಲ್ಲಿಸದೇ ಇರುವುದನ್ನು ಪರಿಶೀಲಿಸಿದಾಗ, ತನ್ನ ಮೇಲಿನ ಆರೋಪವನ್ನು ಪರೋಕ್ಷವಾಗಿ ಒಪ್ಪಿಕೊಂಡಿರುತ್ತಾರೆಂದು ಮಂಡನಾಧಿಕಾರಿಗಳು ವಾದಿಸಿರುತ್ತಾರೆ.

26) 1ನೇ ಆ.ಸ.ನೌ.ರವರು ಸಮರ್ಥಿಸಿಕೊಂಡಿರುವ ರಕ್ಷಣಾ ಸಮರ್ಥನೆಯು ಸರ್ಕಾರಿ ನೌಕರನಿಗೆ ತಕ್ಕುದಲ್ಲವಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ಆ.ಸ.ನೌ–1 ಮತ್ತು 2ರವರು ಸಾರ್ವಜನಿಕ ನೌಕರರಾಗಿದ್ದು, ಕಾನೂನು ನಿಯಮಗಳನ್ನು ಪರಿಪಾಲಿಸದೆ ದುರ್ನಡತೆ ಮತ್ತು ಕರ್ತವ್ಯಲೋಪವೆಸಗಿರುವುದನ್ನು ಶಿಸ್ತು ಪ್ರಾಧಿಕಾರವು, ಮಂಡನಾಧಿಕಾರಿಗಳ ಮುಖಾಂತರ ಸಾಕ್ಷ್ಯಾಧಾರ ನೀಡಿ ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆಂದು ತೀರ್ಮಾನಿಸಲಾಗಿದೆ.

27) ಕಾರಣ, ಶಿಸ್ತು ಪ್ರಾಧಿಕಾರದವರು ಆ.ಸ.ನೌ ರವರುಗಳು ದುರ್ನಡತೆ ಮತ್ತು ಕರ್ತವ್ಯಲೋಪವೆಸಗಿರುವುದನ್ನು ರುಜುವಾತುಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆಂದು ನಿರ್ಣಯಿಸಲಾಗಿದೆ. **ಆಸನೌ–1 ರವರು ದಿನಾಂಕ 30/06/2037 ರಂದು ಹಾಗೂ ಆಸನೌ–2 ರವರು ದಿನಾಂಕ 28/02/2040 ರಂದು ನಿವೃತ್ತಿ ಹೊಂದುವವರಿದ್ದಾರೆ.** ಆ.ಸ.ನೌರವರುಗಳು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯಲೋಪವೆಸಗಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)(ii) ರಿಂದ (iii) ರಡಿಯಲ್ಲಿ ಆ.ಸ.ನೌ.1 ಮತ್ತು 2ರವರು ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ **ಸಂಭವನೀಯತೆ** (probabalities) ಕಂಡು ಬಂದಿರುತ್ತದೆ. **ಈ ಎಲ್ಲಾ ಕಾರಣಗಳಿಂದ ಅಂಶ ನಂ.1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**ಆದೇಶ**

*ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರಾದ (1) **ಶ್ರೀ ಎಂ.ಕೆ.ರಮೇಶ್,** ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತೊಗರಿಕಟ್ಟೆ ಗ್ರಾಮ ಪಂಚಾಯಿತಿ ಮತ್ತು (2) **ಶ್ರೀ.ಮಂಜುನಾಥ,** ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತೊಗರಿಕಟ್ಟೆ ಗ್ರಾಮ ಪಂಚಾಯತಿ, ಹಾಲಿ ಮೈದೂರು ಗ್ರಾಮ ಪಂಚಾಯತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆರವರುಗಳ ವಿರುದ್ಧ ಹೊರಿಸಲಾದ ಆರೋಪವನ್ನು **ರುಜುವಾತುಪಡಿಸಲಾಗಿದೆ** ಎಂದು ನಿರ್ಣಯಿಸಲಾಗಿದೆ.*

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-2ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

7ನೇ ಜನವರಿ 2020

(ಸೆಲ್ವಕುಮಾರ್.ಸಿ)
ಅಪರ ನಿಬಂಧಕರು ವಿಚಾರಣೆಗಳು-16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## PHERIST

| Sl. No. | Particulars of Documents | Page Nos. |
|---|---|---|
| **File 1** | Order Sheet File (Original). | 1-12 |
| **File 2** | **Documents containing :**<br>I. 12(3) report of Hon'ble Upalokayukta-II, dated: 22/06/2017 (xerox). | 13-17 |
| | II.Government Order No. ಗ್ರಾಅಪ/581/ಗ್ರಾಪಂಕಾ/2017 ಬೆಂಗಳೂರು, ದಿನಾಂಕ 26/07/2017 (xerox). | 18—21 |
| | III. Nomination order No: Uplok-2/DE/929/2017 dated: 10/08/2017 of Hon'ble Upalokayukta-II, Bangalore (Xerox) | 22-23 |
| | IV. Articles of charges dtd.13/09/2017, 6 pages (Original) | 24-29 |
| | V. First Oral Statement of DGO-1 dtd:27/09/2017 (Original) | 30 |
| | VI. First Oral Statement of DGO-2 dtd:27/09/2017 (Original) | 31 |
| | VII. Written statement of DGO-1 dt.3/3/2018 (original) | 33-35 |
| | VIII. Second oral statement of DGO-1 dt.29/8/2019, (original) | 36 |
| | IX. Second oral statement of DGO-2 dt.29/8/2019, (original) | 37 |
| | X.Written arguments of DGO 1 and 2 dt.16/12/2019 (original) | 38-40 |
| **File 3** | **Witness examined on behalf of the Disciplinary Authority** | |
| | **PW-1**: Sri.Gowli Eranna, dt.23/5/2018, 3 pages (Original) | 41-43 |
| | **PW-2:** Sri.N.Lingareddy dt.06/02/2019, (original) | 44-45 |
| | **PW-3:** Sri.S.C.Manjappa, dt.4/5/2019(original) 7 pages | 46-52 |
| | **Documents marked on behalf Disciplinary Authority (Ex.P1 to Ex.P.6)** | |
| | **Ex.P-1:** Complaint of Sri.Gowli Eranna and others in form No.I dt.16/6/2014(original) | 53-57 |
| | **Ex.P-2:** Complaint of Sri.Gowli Eranna and others in form No.II (original) dt.16/6/2014 | 58-59 |

| | | |
|---|---|---|
| | **Ex.P-3:** Enquiry Report of Sri.S.C.Manjappa, DSP,KLA, Davanagere dt.26/11/2014, 5 pages (original) | 60-64 |
| | **Ex.P-4:** Report of Sri.N.Lingareddy, SP,KLA, Davanagere dt.28/11/2014 3 pages (original) | 65-67 |
| | **Ex.P-5:** letter of Sri.S.C.Manjappa, DSP, KLA, dt.11/9/2017 addressed to CEO, Tq.Panchayath, Harapanahalli with enclosures(62 sheets) page No.68 –original, Page No.69 to 136 (xerox) | 68-136 |
| | **Ex.P-6**: Photographs – 9 Nos. (Original | 137-141 |
| | **Ex.P.7:** Statement of witnesses, 4 sheets (original) | 142-145 |
| | **Ex.P.8:** Letter of CEO, Tq Panchyath, Harapanahalli to DSP,KLA, Davanagere dt.20/11/2014, 4 sheets, (original) | 146-149 |
| | **Ex.P.9:** Photographs-2 Nos. (original) | 150 |
| | **Ex.P.10:** Photograph-1 No. (original) | 151 |
| | **Ex.P.11:** Photograph-1 No. (original) | 152 |
| **File 4** | **Witness examined on behalf of the DGO** | |
| | **DW-1:** Sri. M.K.Ramesh dt.30/09/2019, 5 pages, (Original) | 153-157 |
| | **DW-2:** Smt.Maddi Kenchamma, dt.20/11/2019, 4 pages, (original) | 158-161 |
| | **Documents marked on behalf of the Disciplinary Authority** | |
| | **Ex.D-1:** Copy of Statement of Kenchamma (xerox) | 162 |
| | **Ex.D-2:** Copy of photographs, 2 pages (xerox) | 163-164 |
| | **Ex.D.3:** Copy of bank passbook 2 pages(xerox) | 165-166 |
| | **Ex.D.4:** Copy of statement of Smt.Saritha(xerox) | 167 |
| | **Ex.D.5:** Copy of cheque slips , 3 pages(xerox) | 168-170 |
| | **Ex.D.6:** Copy of bank pass book, 2 pages (xerox) | 171-172 |

Receipt of the above report and original records may kindly be acknowledged.

**(SELVA KUMAR.C)**
Additional Registrar Enquiries-16
Karnataka Lokayukta
Bangalore.